## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.899/2020

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪುರುಷೋತ್ತಮ | ಸಿಡಬ್ಲ್ಯೂ-2 |
| ತಂದೆಯ ಹೆಸರು | - | ಮದ್ದಪ್ಪ | ಪಿಡಬ್ಲ್ಯೂ-1 |
| ವಯಸ್ಸು | - | 50 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ | - | ಕೆ ಕೆ ಹಟ್ಟಿ ಗ್ರಾಮ | |

**ದಿನಾಂಕಃ05.03.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.1 ನನಗೆ ಗೊತ್ತು. ಮೃತ ಪ್ರೇಮಣ್ಣ ನನಗೆ ಗೊತ್ತು. ಸದರಿ ಪ್ರೇಮಣ್ಣ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿದ್ದಾನೆ. ಚಾಸಾ.1 ಎರಡು ವರ್ಷಗಳ ಹಿಂದೆ ಮೃತ ಪಟ್ಟಿದ್ದಾನೆ. 2019 ರಲ್ಲಿ ಪ್ರೇಮಣ್ಣ ಟಿ ವಿ ಎಸ್ ಬೈಕ್ ಚಾಲನೆ ಮಾಡಿಕೊಂಡು ಯಲ್ಲದಕೆರೆ ರಸ್ತೆ ಮೇಲೆ ಬಡಗೊಲ್ಲರಹಟ್ಟಿ ಸಮೀಪ ಹೋಗುತ್ತಿರುವಾಗ ಒಂದು ಲಾರಿ ಚಾಲಕನು ಅಪಘಾತ ಮಾಡಿರುತ್ತಾನೆ. ಪ್ರೇಮಣ್ಣ ಹೋಗುತ್ತಿದ್ದ ವಾಹನದ ಸಂಖ್ಯೆ ಗೊತ್ತಿಲ್ಲ. ಅಪಘಾತ ಪಡಿಸಿದ ಲಾರಿಯು ಹಿರಿಯೂರು ಕಡೆಯಿಂದ ವೇಗವಾಗಿ ಬರುತ್ತಿತ್ತು. ಬಡಗೊಲ್ಲರಹಟ್ಟಿ ಗೇಟ್ ಹತ್ತಿರ ಹೊರಕೇರಪ್ಪನ ಜಮೀನಿನ ಬಳಿ ಅಪಘಾತವಾಗಿದೆ. ಅಪಘಾತದಲ್ಲಿ ಪ್ರೇಮಣ್ಣನಿಗೆ ಎದೆಗೆ ತಲೆಗೆ ಮೈಕೈಗೆ ಪೆಟ್ಟಾಗಿರುತ್ತವೆ. ಮೊದಲು ಹಿರಿಯೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು ನಂತರ ಚಿತ್ರದುರ್ಗದ ಆಸ್ಪತ್ರೆಗೆ ತೆಗೆದುಕೊಂಡು ಹೋಗುವಾಗ ಮಾರ್ಗ ಮದ್ಯೆ ಮೃತ ಪಟ್ಟಿರುತ್ತಾನೆ. ಸದರಿ ಅಪಘಾತದ ಬಗ್ಗೆ ನಾನು ಯಾರಿಗೂ ಹೇಳಿಲ್ಲ ಆದರೆ ಊರಿನಲ್ಲಿ ಎಲ್ಲರಿಗೂ ಗೊತ್ತಾಯಿತು. ಅಪಘಾತ ಪಡಿಸಿದ ಲಾರಿ ಸಂಖೆ ಗೊತ್ತಿಲ್ಲ. ಸದರಿ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ಸದರಿ ಲಾರಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಗೈರು ಹಾಜರಿದ್ದು ಆತನ

ಗುರುತಿನ ಬಗ್ಗೆ ವಕೀಲರು ತಕರಾರು ಇಲ್ಲ ಎಂದು ತಿಳಿಸುತ್ತಾರೆ. ಅಪಘಾತದ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಮಾಡಿಕೊಂಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ಅಪಘಾತವು ದಿಃ 26.04.2019 ರಂದು ಸಂಜೆ 7.15 ಕ್ಕೆ ಆಗಿರುತ್ತದೆ ಎಂದರೆ ನಿಜ. ಲಾರಿ ನಂ.ಕೆಎ-38-4167 ಇದರ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ನಿಜ. ಮೃತ ಪ್ರೇಮಣ್ಣ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ವಾಹನದ ನಂ. ಕೆಎ 44 ಜೆ 9046 ಎಂದರೆ ನಿಜ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಬಗ್ಗೆ ಚಾಸಾ.1 ರವರಿಗೆ ಪೋನ್ ನಲ್ಲಿ ಹೇಳಿದ್ದೇನೆ ಎಂದರೆ ನಿಜ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ ಕೆ ವಕೀಲರಿಂದ-**

ಅಪಘಾತದ ಬಗ್ಗೆ ಪೊಲೀಸರಿಗೆ ಮರನೇ ದಿನ ಹೇಳಿಕೆ ಕೊಟ್ಟಿದ್ದೇನೆ. ಸದರಿ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ಕೊಟ್ಟಿದ್ದೇನೆ. ನಾನು ಅಪಘಾತದ ಬಗ್ಗೆ ಪೊಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನಾಂಕ ಗೊತ್ತಿಲ್ಲ. ನಮ್ಮ ಊರಿನಿಂದ ಹಿರಿಯೂರಿಗೆ ನಾನು ಹೋಗುತ್ತಿದ್ದೆ. ಅಪಘಾತವನ್ನು ನಾನು ಸ್ವತಃ ನೋಡಿಲ್ಲ ಎಂದರೆ ನಿಜ. ಅಪಘಾತವಾದ ನಂತರ ಊರಿನಲ್ಲಿ ವಿಷಯ ಗೊತ್ತಾಗಿ ಸ್ಥಳಕ್ಕೆ ಹೋಗಿ ನೋಡಿದ್ದೇನೆ ಎಂದರೆ ನಿಜ. ಪ್ರೇಮಣ್ಣನ ಮಗನ ಪೋನ್ ನಂಬರ್ ಗೊತ್ತಿಲ್ಲ. ನಾನು ಅಪಘಾತದ ಸ್ಥಳಕ್ಕೆ ಹೋದಾಗ ಲಾರಿ ಚಾಲಕ ಅಲ್ಲಿಯೇ ಇದ್ದ. ಅಪಘಾತವನ್ನು ನಾನು ಸ್ವತಃ ನೋಡದೇ ಇದ್ದುದ್ದರಿಂದ ಅದು ಹೇಗಾಯಿತು ಎಂದುಹೇಳಲು ಆಗುವುದಿಲ್ಲ ಎಂದರೆ ಸುಳ್ಳು. ಮೃತ ಪ್ರೇಮಣ್ಣ ಮತ್ತು ಅವರ ಮಗ ದ್ಯಾಮೇಗೌಡ ಮತ್ತು ಒಂದೇ ಊರಿನವರು ಎಂದರೆನಿಜ. ಪ್ರೇಮಣ್ಣನ ಅವಲಂಬಿತರಿಗೆ ಪರಿಹಾರ ಪಡೆಯುವ ಉದ್ದೇಶದಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಾನು ಆ ದಿನ ಅಪಘಾತದ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು